**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಪ್ರಾಸ –02

**CC No**: 41/2020 ಚಾಸ- 02

| | |
|---|---|
| ಹೆಸರು | **ಸುನೀಲ್** |
| ತಂದೆ/ಗಂಡನ ಹೆಸರು | **ಕಾಳಯ್ಯ** |
| ವಯಸ್ಸು | **48 ವರ್ಷ** |
| ಉದ್ಯೋಗ | **ವ್ಯವಸಾಯ** |
| ವಾಸಸ್ಥಳ | ದೇವರಮುದ್ದನಹಳ್ಳಿ ಗ್ರಾಮ |

ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿದೆ. ಸುಮಾರು 6 ವರ್ಷಗಳ ಹಿಂದೆ ಬೆಳಗ್ಗೆ 11–00 ಗಂಟೆಗೆ ನಮ್ಮ ಮನೆಯ ಹತ್ತಿರ ಇರುವಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಕುರಿ ಕಳ್ಳತನವಾಗಿವೆ, ಸಾಕ್ಷಿಗಾಗಿ ಸಹಿ ಮಾಡಬೇಕೆಂದು ಹೇಳಿದರು. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಸಾಕ್ಷಿ ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ.2 ಅನ್ನು ಎಲ್ಲಿ, ಯಾವಾಗ ಮತ್ತು ಯಾವ ಕಾರಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀಸವಾಲು ಸ.ಸ.ಅಭಿಯೋಜಕರಿಂದಃ**

ದಿನಾಂಕ 02.07.2019 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ 3 ರವರನ್ನು ಸ್ಥಳ ಮಹಜರ್ ಗಾಗಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಒಪ್ಪಿ ನಾನು ಚಾಸಾ 1 ರವರ ಮನೆಯಗೆ ಲಗತ್ತಾಗಿ ಉತ್ತರ ಭಾಗದ ಕೊಟ್ಟಿಗೆಯ ಮುಂಭಾಗ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಪೊಲೀಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 1 ರವರ ಕುರಿಗಳು ಕಳ್ಳತನದ ವಿಷಯವಾಗಿ ಸ್ಥಳ ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಮಹಜರ್ ಅನ್ನು ಘಟನಾ ಸ್ಥಳದಲ್ಲಿಯೇ ಬೆಗಳಗ್ಗೆ 11-30 ರಿಂದ 12-00 ವರಗೆ ಮಾಡಿ ಲ್ಯಾಪ್ ಟಾಪ್ ನಲ್ಲಿ ತಯಾರಿಸಿ ನಂತರ ಪೆನ್ ಡ್ರೈವ್ ಗೆ ಹಾಕಿ ಪ್ರಿಂಟ್ ತೆಗೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದು, ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಹಾಜರಿದ್ದು, ತಮ್ಮ ಪರ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.